ಬಗೆಯಲು ಯಾರಿಗೂ ನಾನು ಬಿಡೋದಿಲ್ಲ..'

ಅಪೂರ್ವಳ ನಿಲುವು ಅವನನ್ನು ರೇಗಿಸಿತು,'ಬೇಡ ಹುಡ್ಗಿ..ನನ್ನ ತಂಟೆಗೆ ಬರಬೇಡಾ..!' ಅವನು ಅವಡುಗಚ್ಚುತ್ತ, ಬೆದರಿಸುವಂತೆ ಕಣ್ಣು ಕೆಕ್ಕರಿಸುತ್ತ ಎರಡು ಹೆಜ್ಜೆ ಮುಂದಿಟ್ಟ.

ಅವನು ಮನೆಯಿಂದ ಹೊರಡುತ್ತಿದ್ದಾನೆಂದು ಖಚಿತವಾಗುತ್ತಲೇ, ಅಪೂರ್ವ ಅಲ್ಲಿಂದ ಓಡು ನಡಿಗೆಯಲ್ಲಿ ತೆರಳುತ್ತ, ತಾನು ತೆಗೆದಿರಿಸಿದ್ದ ಚೀಲವನ್ನು ತೆಗೆದುಕೊಂಡು ಒಂದೇ ಉಸಿರಿಗೆ ಮುಂಬಾಗಿಲು ದಾಟಿ ಬಾಗಿಲೆಳೆದುಕೊಂಡು ಚಿಲಕ ಹಾಕಿಕೊಂಡಳು. ಸೂರ್ಯ ಒಳಗಿನಿಂದ ಒಂದೇ ಸಮನೇ ಬಾಗಿಲು ಬಡಿಯುತ್ತಿದ್ದ. 'ಬಾಗಿಲು ತೆಗೀ..ನನ್ಗೆ ಹೋಗ್ಬೇಕು..ನನ ಒಳಗೆ ಕೂಡಿ ಹಾಕಲು ನಿನಗೆಷ್ಟು ಧೈರ್ಯ..?'

ಅಪೂರ್ವ ಅರೆಕ್ಷಣ ನಿಂತು ಸಾವರಿಸಿಕೊಂಡಳು. ತನ್ನಲ್ಲಿ ಇಷ್ಟೊಂದು ಧೈರ್ಯ ಹೇಗೆ ಬಂದಿತೋ.. ಎಂದು ಅವಳಿಗೇ ಬೆರಗೆನಿಸಿತು. ಮುಂಬಾಗಿಲಿಗೆ ಬೀಗ ಜಡಿಯುತ್ತ, ಮನೆಯ ಹಿಂದಿನಿಂದ ಹೊರ ಹೋಗಲಿದ್ದ ಬಾಗಿಲಿಗೆ ಹೊರಗಿನಿಂದ ಚಿಲಕ ಹಾಕಿದಳು. ಸೂರ್ಯ ಹಿಂದಿನ ಬಾಗಿಲು ಎಳೆಯುವ ಪ್ರಯತ್ನ ಮಾಡುತ್ತಿದ್ದದ್ದು ಅವಳಿಗೆ ಅರಿವಾಗುತಿತ್ತು. ಅಂಗಳ ದಾಟಿ ಗೇಟು ಹಾಕಿ ಆಟೊ ಹಿಡಿದು ಆಸ್ಪತ್ರೆಯ ಹಾದಿ ಹಿಡಿದಾಗ ನೀಳವಾಗಿ ಉಸಿರು ಹೊರದಬ್ಬಿದಳು. ದಾರಿಯುದ್ದಕ್ಕೂ ಸೂರ್ಯನ ಮಾತುಗಳು, ಅವನ ಒರಟುತನ, ನಡವಳಿಕೆ ಅವನ ಮನವನ್ನು ಆವರಿಸಿತ್ತು. ಸ್ವಂತ ಮನೆಯಲ್ಲೇ ಕಳ್ಳತನ ಮಾಡಲು ಹೊರಟ ಅವನ ನಡತೆಯ ಹಿಂದಿನ ಅಸಹಾಯಕತೆ ಅವಳಿಗೆ ಅರಿವಾಗಿತ್ತು.

ಯಾವುದೋ ಕೊಲೆ ಮಾಡಿ ಜೈಲು ಸೇರಿದ ಆತನನ್ನು ರಾಯರು ತ್ಯಜಿಸಿದ್ದಾರೆ.. ಮಗನೆಂದು ಅವರು ಸ್ವೀಕರಿಸಿಲ್ಲ.. ಜೈಲಿಗೂ ನೋಡಲು ಹೋಗಿಲ್ಲ.. ಅಲ್ಲಿಂದ ಬಿಡುಗಡೆಯಾದ ಬಳಿಕವೂ ಮನೆಗೆ ಸೇರಿಸಿಕೊಂಡಿಲ್ಲ.. ಹೊರಗೆ ಬಂದ ಸೂರ್ಯನಿಗೆ ಸಂಪಾದನೆ ಇಲ್ಲ..ಹೊಟ್ಟೆಪಾಡಿಗೆ ಭಿಕ್ಷೆ ಬೇಡುವುದಲ್ಲದೆ ಬೇರೆ ಏನು ಮಾಡಿಯಾನು..? ಅವನ ನೋವು, ಹತಾಶೆ ಕ್ರೋಧ ಸಹಜವೇ..! ಹೆತ್ತವರ ಬಗ್ಗೆ ದ್ವೇಷ ತಳೆಯಲು ಇದೇ ಕಾರಣ..! ರಾಯರು ಮಗನನ್ನೇ ತೊರೆದು ಬದುಕುವಷ್ಟು ಕಠಿಣ ಹೃದಯಿ ಏಕಾದರು..? ರಕ್ತ ಸಂಬಂಧಕ್ಕಿಂತಲೂ ಗಾಢವಾದ ಸಂಬಂಧ ಬೇರೊಂದಿಲ್ಲ ಎನ್ನುತ್ತಾರೆ. ಅವರಿಗೆ ತಮ್ಮ ಮಗನಿಗಿಂತ ಆದರ್ಶ ಮಮಕಾರವೇ ಮಿಗಿಲಾಯಿತೇ..? ಪುತ್ರ ವ್ಯಾಮೋಹದ ಮುಂದೆ ಅವರ ಕೋಪ, ತಾಪ, ಹಠ, ಪ್ರತಿಷ್ಠೆ ಏಕೆ ಕರಗಲಿಲ್ಲ..? ರಾಯರ ಈ ತಿರಸ್ಕಾರವೇ ಸೂರ್ಯನನ್ನು ಕಠೋರ ಮಾಡಿದೆ..ಮನುಜನನ್ನು ಮೃಗ ಮಾಡಿದೆ..ಹೃದಯ ಕಲ್ಲು ಮಾಡಿದೆ..ರಾಯರ ತೆರೆದ ಬಾಹುಗಳ ಸ್ವೀಕಾರ, ಸೂರ್ಯನ ಕಲ್ಲೆದೆ ಕರಗಿಸಬಹುದು.. ಸೂರ್ಯನಿಗೆ ಮತ್ತೆ ಸಮಾಜದ ಮುಖ್ಯವಾಹಿನಿಯಲ್ಲಿ ಸಾಮಾನ್ಯನಂತೆ ಬದುಕುವ ಅವಕಾಶ ಕಲ್ಪಿಸಿಕೊಡಬಹುದು..ಮನೆಯವರೇ ಮುನಿದರೆ ಅವನೆಲ್ಲಿಗೆ ಹೋಗಬೇಕು..?

ಏನೋ ಅಕಸ್ಮಾತ್ ತಪ್ಪು ನಡೆದು ಹೋಗಿದೆ..ಅದನ್ನೇ ಜೀವನ ಪರ್ಯಂತ ಮನಸಲ್ಲಿಟ್ಟುಕೊಂಡು, ಕೊರಗಿ, ಸೂರ್ಯನಿಗೆ ಜೀವನ ಪರ್ಯಂತ ಶಿಕ್ಷೆ ವಿಧಿಸಬೇಕೇ..? ಆತ, ತಾನು ಮಾಡಿದ ತಪ್ಪಿಗೆ ಜೈಲಿಗೆ ಹೋಗಿ ಶಿಕ್ಷೆ ಅನುಭವಿಸಿ ಬಂದಾಗಿದೆ..ಮತ್ತೂ ಈ ತಿರಸ್ಕಾರದ ಶಿಕ್ಷೆಯೇಕೆ..? ತಪ್ಪನ್ನು ಸರಿಪಡಿಸಿ ಕೊಳ್ಳುವ ಒಂದು ಅವಕಾಶ ನೀಡಬೇಕು..ರಾಯರು ವಿಶಾಲ ಮನಸ್ಸಿನಿಂದ ಮಗನನ್ನು  ಕ್ಷಮಿಸಬೇಕು..ಅವರ ಈ ಔದಾರ್ಯವೊಂದೇ, ಆ ಸಂಸಾರವನ್ನು ಸರಿಪಡಿಸಬಲ್ಲದು.. ಆಗ ವಿಜಯಮ್ಮನ ನಿತ್ಯ ಕೊರಗಾಟಕ್ಕೂ ಒಂದು ಅಂತ್ಯ ದೊರಕುತ್ತದೆ..ಆದರೆ ರಾಯರನ್ನು ಇದಕ್ಕಾಗಿ ಮಣಿಸುವುದು ಯಾರು..? ಪತ್ನಿಯ ಕೊರಗು, ನೋವು, ರೋದನ ಯಾವುದೂ ರಾಯರ ಕಠಿಣ ನಿಲುವನ್ನು ಅಲುಗಾಡಿಸದಾಗ ತಾನು ಪ್ರಯತ್ನಿಸಿದರೆ ರಾಯರು ಮಣಿಯುವರೇ..? ತಾನು ಎಷ್ಟಾದರೂ ಈ ಮನೆಗೆ ಹೊರಗಿನವಳು..ತನ್ನ ಮಾತನ್ನು ಅವರು ಆಲಿಸುವರೇ..? ತನ್ನಂಥ ಅನಾಥಳನ್ನು, ಯಾರೋ ಮೂರನೆಯವಳನ್ನು ಮನೆಗೆ ತಂದು ಸೇರಿಸಿ, ಆಸರೆ ನೀಡಿ, ವಿದ್ಯೆ ಕಲಿಸುತ್ತಿರುವ ಔದಾರ್ಯವಂತ ರಾಯರು, ಸ್ವಂತ ಮಗನ ಬಗ್ಗೆ ಇಷ್ಟೊಂದು ಮುನಿಸೇತಕೆ ತಳೆದಿದ್ದಾರೆ..? ಅಂಥ ಪ್ರಸಂಗ ಏನು ನಡೆದಿರಬಹುದು..? ಸೂರ್ಯ ಕೊಲೆ ಮಾಡಿದ್ದು ಯಾರನ್ನು..? ಯಾಕಾಗಿ..? ಒಂದು ಕೊಲೆ ಮಾಡಿ ಜೈಲು ಶಿಕ್ಷೆ ಅನುಭವಿಸಿದ್ದಾನೆಂದರೆ ಅದು ಕನಿಷ್ಠ ಏಳೆಂಟು ವರ್ಷಗಳ ಶಿಕ್ಷೆ ಆಗಿರಬಹುದು.. ಸೂರ್ಯ ಯಾವಾಗ ಜೈಲಿನಿಂದ ಬಿಡುಗಡೆ ಹೊಂದಿ ಹೊರ ಬಂದಿದ್ದಾನೋ..? ಆ ರೌಡಿ ಗೋಪಿ ಜೊತೆ ಹೊರಗೆ ಸ್ನೇಹ ಸಂಪಾದಿಸಿ ಎಷ್ಟು ವರ್ಷಗಳು ಆಗಿದೆಯೋ..? ಅಂದರೆ ಸೂರ್ಯ, ಬಾಲ ಅಪರಾಧಿಯಾಗಿ ಜೈಲು ಸೇರಿದ್ದಾನೆಯೇ..? ಬಾಲ್ಯದಲ್ಲಿ ಕೊಲೆ ಮಾಡಿ ಜೈಲು ಸೇರುವಂಥ ಪಾಡು ಸೂರ್ಯನಿಗೇಕೆ ಒದಗಿ ಬಂದಿತು..? ಅಬೋಧ ಬಾಲ್ಯದಲ್ಲಿ ಮಾಡಿದ ತಪ್ಪಿಗೆ ರಾಯರು ಕ್ಷಮಿಸದೇ ಇರುವುದು ಅವರ ತಪ್ಪೇ ಸರಿ..ತಾನು ಹೇಗಾದರೂ ಒಡೆದ ಈ ಮನೆಯನ್ನು, ಮನಗಳನ್ನು ಸರಿಪಡಿಸಬೇಕು..ಆ ಮನೆಯ ಅನ್ನ ತಿಂದ ಋಣ, ಹೀಗಾದರೂ ಸಂದಾಯ ಮಾಡಬೇಕು! ರಾಯರು ಗುಣಮುಖರಾಗುತ್ತಲೇ ಈ ನಿಟ್ಟಿನಲ್ಲಿ ಕಾರ್ಯ ಪ್ರವೃತ್ತಳಾಗಬೇಕು ಎಂದುಕೊಂಡಳು ಅಪೂರ್ವ.

ಆಸ್ಪತ್ರೆ ತಲುಪುತ್ತಲೇ ತಮಗೆ ಒದಗಿಸಿದ್ದ ಕೋಣೆಗೆ ಬಂದಾಗ, ಆ ಕೋಣೆಗೆ ಬೀಗ ಹಾಕಲಾಗಿತ್ತು. ವಿಜಯಮ್ಮ ಕೆಳಗಿನ ಅಂತಸ್ತಿನಲ್ಲಿದ್ದ ಐ.ಸಿ.ಯು.ನ ಬಳಿ ಇರಬೇಕೆಂದು ಲಿಫ್ಟ್ ಮೂಲಕ ಕೆಳಗೆ ಬಂದಾಗ ವಿಜಯಮ್ಮ ಯಾವುದೋ ತರುಣ ವೈದ್ಯರ ಬಳಿ ಮಾತನಾಡುತ್ತ ನಿಂತದ್ದು ಕಂಡಿತು.

ರಾಯರಿಗೆ ಏನಾಯಿತು..? ಎಂಬ ಅತಂಕದಿಂದ ಅಪೂರ್ವ ವಿಜಯಮ್ಮನ ಬಳಿ ಧಾವಿಸಿದವಳು, 'ಆಂಟಿ..ಏನಾಯಿತು..?' ಎಂದು ಆತಂಕದಿಂದ ಪ್ರಶ್ನಿಸಿದಾಗ, ವಿಜಯಮ್ಮ ಮತ್ತು ಆ ವೈದ್ಯನ ನೋಟ ಇವಳತ್ತ ಹರಿಯಿತು.

'ಇವ್ರಿಗೆ ಅದೇನೋ ಪಲ್ಸ್ ಕಮ್ಮಿ ಇದ್ಯಂತೆ..ಆಕ್ಸಿಜನ್ ನೀಡಿದ್ದಾರಂತೆ.. ನನಗ್ಯಾಕೋ ತುಂಬಾ ಭಯವಾಗ್ತಿದೆ ಅಪೂರ್ವ..' ವಿಜಯಮ್ಮ ಅಳುಮುಖ ಮಾಡುತ್ತ ಕಂಗಾಲಾಗಿ ನುಡಿದರು.

'ಅತ್ತೆ ..ಧೈರ್ಯ ತಂದ್ಕೊಳ್ಳಿ..ಅಂಥದ್ದೇನೂ ಆಗಲ್ಲ.. ನೀವು ವರಿ ಮಾಡ್ಬೇಡಿ.. ನಾನು ಸರ್ಜನ್ ಹತ್ರ ಮಾತನಾಡಿದ್ದೀನಿ..ಅವ್ರು ಬಂದು ಅಟೆಂಡ್ ಮಾಡ್ತೀನಿ ಅಂದಿದ್ದಾರೆ..ಇನ್ನೇನು ಬರಬಹುದು..ಚಿಂತೆ ಮಾಡ್ಬೇಡಿ..' ಆತ ವಿಜಯಮ್ಮನಲ್ಲಿ ಉಡುಗಿದ್ದ ಧೈರ್ಯ ತುಂಬಲೆತ್ನಿಸಿದ.

'ಇಲ್ಲ ಆದರ್ಶ..ನಿನಗೊತ್ತಿಲ್ಲ..ಇದಕ್ಕೆಲ್ಲಾ ನಾನೇ ಕಾರಣ..ನಾನೇ ದುಡುಕಿ ಅವ್ರಿಗೆ ಏನೇನೋ ಅಂದ್ಬಿಟ್ಟೆ..ಇದು ನನ್ನದೇ ತಪ್ಪು..ಅವ್ರು ನನ್ನ ಮಾತುಗಳನ್ನು ತೀರಾ ಮನಸ್ಸಿಗೆ ಹಚ್ಕೊಂಡು ಬಿಟ್ಟಿದ್ದಾರೆ ಅನ್ಸುತ್ತೆ..ಇನ್ಮೇಲೆ ಅವ್ರಿಗೆ ಮನಸ್ಸಿಗೆ ನೋವಾಗುವ ರೀತಿ ನಾನು ನಡ್ಕೊಳ್ಳುವುದಿಲ್ಲ..ಅವ್ರು ನನಗೆ ಮಾಡಿರುವ ಉಪಕಾರಕ್ಕೆ ನಾನು ಏನು ಮಾಡಿದ್ರೂ ಕಮ್ಮೀನೇ..ಅಂಥದ್ದರಲ್ಲಿ..ಅವ್ರಿಗೆ ಹೀಗೆ ನಾನು ಮಾತನಾಡಬಾರದಿತ್ತು..' ತಮ್ಮ ದುಗುಡದ ಬೇಗುದಿಯಲ್ಲಿ ಬೇಯುತ್ತ ವಿಜಯಮ್ಮ ಚಡಪಡಿಸುತ್ತಿದ್ದರೆ, ಅವರ ಮಾತುಗಳಲ್ಲಿ ಅಡಗಿದ್ದ ಹೊಸ ಅರ್ಥಗಳನ್ನು ಹುಡುಕುವಲ್ಲಿ ಅಪೂರ್ವಳನ್ನು ವಿವಶವಾಗಿಸಿತ್ತು.

ರಾಯರೇನು ವಿಜಯಮ್ಮನಿಗೆ ಉಪಕಾರ ಮಾಡಿರುವುದು..? ಇದೇನು ಇವರು ಹೀಗೆ ಮಾತನಾಡುತಿದ್ದಾರೆ..? ಪತ್ನಿಗಾಗಿ, ಪತಿ ಏನೇ ಮಾಡಿದರೂ ಅದು ಕರ್ತವ್ಯವಾಗುತ್ತದೇ ಹೊರತು, ಉಪಕಾರವಾಗುವುದಿಲ್ಲ. ರಾಯರ ಅನಾರೋಗ್ಯ ವಿಜಯಮ್ಮನನ್ನು ಹೀಗೆ ಪೂರ್ತಿಯಾಗಿ ಕಂಗೆಡಿಸಿರಬಹುದು.. ತಮ್ಮನ್ನು  ತಾವು ಅಪರಾಧಿ ಮನೋಭಾವದಿಂದ ಹೀಗೆಲ್ಲ ತಳಮಳಿಸುತ್ತಿರಬೇಕು ಎಂದುಕೊಂಡಳು.

(ಸಶೇಷ)

## ಒಕ್ಕಲು

ಮನುಷ್ಯರೆಲ್ಲರದೂ
ಒಂದೇ ಗೋತ್ರ,
ಕಾಮ ಸೂತ್ರ .
ಹೆಚ್ಚೆಂದರೆ
ಮಕ್ಕಳು, ಮೊಮ್ಮಕ್ಕಳು
ಕೊನೆಗೆ
ಮಸಣದ ಒಕ್ಕಲು!

★ ಆರೆಚ್ ಹಾಲಾಡಿ

